ಓ ಎಸ್ ನಂಬರ 107/2011
ಪಿ ಡಬ್ಲ್ಯೂ 4

**ದಿನಾಂಕಃ 16.11.2024.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಮ್ಮ ಖುದ್ದು ಊರು ಬೈಲಹೊಂಗಲ. ನಾನು 7 ನೇ ತರಗತಿವರೆಗೆ ಭ್ಯಾಸಂಗ ಮಾಡಿರುತ್ತೇನೆ. ವಾದಿ ಮಹಾಂತೇಶ ರವರು ಬೆಳಗಾವಿಯವರು. ಸದರಿಯವರು business ಮಾಡುತ್ತಾರೆ ಅವರು transport ಕಂಪನಿಯಲ್ಲಿ ಇರುತ್ತಾರೆ. ನಾನು ಖುದ್ದಾಗಿ ಅವರನ್ನು ನೋಡಿರುತ್ತೇನೆ. ವಾದಿ ಮಹಾಂತೇಶ ರವರು ತೆರಿಗೆ ಪಾವತಿದಾರರು ಎಂದರಾ ಸಾಕ್ಷಿ ಇಲ್ಲ ಎನ್ನುತ್ತಾರೆ. ವಾದಿ ಮಹಾಂತೇಶ ರವರು ನ್ಯಾಯಾಲಕ್ಕೆ ಹಾಜರಾದರೇ ಸತ್ಯಾಂಶ ಹೊರಬರುತ್ತದೆ ಎಂದು ನಿಮಗೆ ಜಿಪಿಎ ನೀಡಿ ಸಾಕ್ಷಿ ನುಡಿಯಲು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಆರಾಮ ಇರಲಿಲ್ಲ ಎನ್ನುತ್ತಾರೆ. ಸದರಿಯವರಿಗೆ ಆರಾಮ ಇಲ್ಲ ಎಂದು ಹೇಳಿದ್ದು, ಯಾವ ಸಮಸ್ಯೆ ಇರುತ್ತದೆ ಎಂದರೆ ಸಾಕ್ಷಿ ಮೇಲಿಂದ ಮೇಲೆ ಜ್ವರ ಬರುತ್ತಿತ್ತು ಎನ್ನುತ್ತಾರೆ. ಈಗ ವಾದಿ ಆರಾಮ ಇರುತ್ತಾರೆ ಎಂದರೆ ಸರಿಯಲ್ಲ. ನನಗೆ 1 ವರ್ಷದ ಹಿಂದೆ ಪವರ್ ಆಫ್ ಆಟರ್ನಿ ಬರೆದುಕೊಟ್ಟಿರುತ್ತಾರೆ ಎನ್ನುತ್ತಾರೆ. ನನಗೆ ದಿನಾಂಕ ನೆನಪಿರುವುದಿಲ್ಲ.

2. ಸಾಕ್ಷಿಗೆ ನಿಶಾನೆ ಪಿ 14 ನ್ನು ತೋರಿಸುತ್ತಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ನನಗೆ ಅದೇ ದಾಖಲೆ ನನಗೆ ಬರೆದುಕೊಟ್ಟಿರುವ ಪವರ್ ಆಫ್ ಆಟರ್ನಿ ಎಂದು ಒಪ್ಪಿ ಕೊಳ್ಳುತ್ತಾರೆ. ಸದರಿ ನಿಶೆ ಪಿ 14 ನ್ನು ನೀವು ಎಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಬೈಲಹೊಂಗಲದಲ್ಲಿ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ನಿಶಾನೆ ಪಿ 14 ಬಾಂಡ್ ಪೇಪರನ್ನು ವಾದಿ ಖರೀದಿ ಮಾಡಿಕೊಂಡು ಬಂದಿರುತ್ತಾರೆ ಎನ್ನುತ್ತಾರೆ. ನಿಶಾನೆ ಪಿ 14 ಬಾಂಡ್ ಪೇಪರನ್ನು 20.12.2021 ರಂದು ಖರೀದಿ ಮಾಡಿದ್ದು ಆಗಿರುತ್ತದೆ ಎಂದರೆ ಸರಿ. ನೋಟರಿ ಮಾಡಿಸಿದ್ದು, ದಿನಾಂಕ 16.03.2022 ರಂದು ಎಂದರೆ ಸರಿ. ಬಾಂಡ್ ಪೇಪರ ಪಡೆದು 3 ತಿಂಗಳ ವರೆಗೆ ಯಾಕೆ ಸುಮ್ಮನೆ ಇದ್ದೀರಿ ಮೊದಲೇ ಮಾತುಕತೆಯಾಗಿತ್ತಾ ಏನು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅವರು ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ನಿಶಾನೆ ಪಿ 14 ರಲ್ಲಿ ಹೇಳಿರುವಂತೆ ವಾದಿಗೆ ಆರಾಮ ಇರಲಿಲ್ಲ ಅವರಿಗೆ ಕರೋನಾ ಆಗಿರುತ್ತದೆ ಎಂದು ಬರೆಸಿರುವುದು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಕೋವಿಡ್-19 ನೆಗಟಿವ ಬಂದಿರುತ್ತದೆ ಎಂದು ನಿವೇ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಶಾನೆ ಪಿ 14 ರಲ್ಲಿ ಬರೆದುಕೊಡುವವರು ಬರೆಸಿಕೊಳ್ಳುವವರದು ಇಬ್ಬರದು ಸಹಿ ಇರುತ್ತದೆಯಾ ಎಂದು

ಸಾಕ್ಷಿ ಗೆ ತೋರಿಸಿದಾಗ ಇರುತ್ತದೆ ಎನ್ನುತ್ತಾರೆ. ನಿಶಾನೆ ಪಿ 14 ಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ವಾದಿಯರಿಗೆ ಗೊತ್ತು ಎನ್ನುತ್ತಾರೆ. ದಾವೆಯ ಸಂಪೂರ್ಣ ಮಾಹಿತಿ ನನಗೆ ಗೊತ್ತಿಲ್ಲ ಅದಕ್ಕೆ ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಅವರು ಏನು ಕೊಟ್ಟಿರುತ್ತಾರೆ ಎಂದು ನಾನು ಹೇಳಲಾಗುವುದಿಲ್ಲ ಎನ್ನುತ್ತಾರೆ.

3. ಈ ದಾವೆಗೆ ಮಾಹಿತಿಯನ್ನು ಮಲ್ಲಮ್ಮ ರವರು ನೀಡಿರುತ್ತಾರೆ. ಮಲ್ಲಮ್ಮನ ಪೂರ್ತಿ ಹೆಸರು ಮಲ್ಲವ್ವ ಶಿವರಾಯಪ್ಪ ಕೋಲಕಾರ. ಈ ದಾವೆಯನ್ನು ಹಾಕಲು ಮಾಹಿತಿಯನ್ನು ವಾದಿ ನೀಡಿರುತ್ತಾರೆ. ಈಗ ಸಲ್ಲಿಸಿರುವ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿ ವಾದಿ ನೀಡಿರುತ್ತಾರೆ ಎನ್ನುತ್ತಾರೆ. ಈ ದಾವೆಯಲ್ಲಿ ವಾದಿ ಯಾರು ಪ್ರತಿವಾದಿಯರು ಯಾರು ಎಂದು ನಿಮಗೆ ಸಂಪೂರ್ಣ ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಮಲ್ಲವ್ವ ಶಿವರಾಯಪ್ಪ ಕೋಲಕಾರ ಈ ದಾವೆಯಲ್ಲಿ ಇರುತ್ತಾರೆಯಾ ಎಂದರೆ ಸಾಕ್ಷಿ ಇರುತ್ತಾರೆ ಎನ್ನುತ್ತಾರೆ. ಅವರ ಮಗಳು ಬಸವಣೆವ್ವ ಈ ದಾವೆಯಲ್ಲಿ ಇರುತ್ತಾರಾ ಎಂದರೆ ಸಾಕಿ ಇಲ್ಲ ಎನ್ನುತ್ತಾರೆ. ಬಸವಣೆವ್ವ ರವರ ಮಗ ಭೀಮಶಪ್ಪ ಮಲ್ಲಪ್ಪ ಅಂಬಿಗೇರ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 2 ರವರು ದಾವಾ ಸ್ವತ್ತನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ, ಬರೆದುಕೊಟ್ಟಿರುವುದು ನಮಗೆ ಎನ್ನುತ್ತಾರೆ.

4. ಮಲ್ಲವ್ವ ಶಿವರಾಯಪ್ಪ ಕೊಲಕಾರ ರವರಿಗೆ ವಾದಿ ಹೇಗೆ ಪರಿಚಯ ಎಂದರೆ ಸಾಕ್ಷಿ ನನ್ನಿಂದ ಪರಿಚಯ ಎನ್ನುತ್ತಾರೆ. ಸದರಿ ವ್ಯವಹಾರದಲ್ಲಿ ನೀವು ಭಾಗವಹಿಸಿದ್ದೀರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮಲ್ಲವ್ವ ರವರು ಮಾರಾಟ ಮಾಡುತ್ತಿದ್ದಾರೆ ಎಂದು ವಾದಿಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ ಮಲ್ಲವ್ವ ನನಗೆ ಹೇಳಿರುತ್ತಾರೆ ನಾನು ವಾದಿಗೆ ಹೇಳಿರುತ್ತೇನೆ ಎನ್ನುತ್ತಾರೆ. 1 ನೇ ಪ್ರತಿವಾದಿಯೊಂದಿಗೆ ಕರಾರು ಪತ್ರ ಬರೆದುಕೊಡುವಾಗ ಯಾರು ಬಂದಿದ್ದರು ಎಂದರೆ ಸಾಕ್ಷಿ ಆಕೆಯೊಂದಿಗೆ ಯಾರು ಬಂದಿರಲಿಲ್ಲ, ಆಕೆ ಯೊಬ್ಬಳೇ ಬಂದಿರುತ್ತಾಳೆ ಎನ್ನುತ್ತಾರೆ. ನಮ್ಮ ಕಡೆಯಿಂದ ನಾನು ಮತ್ತು ವಾದಿ ಹೋಗಿದ್ದೇವು. ನಿಮ್ಮೊಂದಿಗೆ ಮತ್ತು ಯಾರು ಬಂದಿದ್ದರು ಎಂದರೆ ಸಾಕ್ಷಿ ಎಚ್ ಆರ್ ಕುಲಕರ್ಣಿ ಹಾಗೂ ಡಿ ಎ ಹಡಪದ. ಎಚ್ ಆರ್ ಕುಲಕರ್ಣಿ ಎಂದರೆ ಯಾರು ಎಂದರೆ ಸಾಕ್ಷಿ ಹಣಮಂತ ರಾಮಚಂದ್ರ ಕುಲಕರ್ಣಿ ಹಾಗೂ ಡಿ ಎ ಹಡಪದ ಎಂದರೆ ಸಾಕ್ಷಿ ಅವರ ಪೂರ್ಣ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಅವರನ್ನು ಯಾರು ಕರೆದುಕೊಂಡು ಬಂದರ ಎಂದರೆ ಸಾಕ್ಷಿ ವಾದಿ ಕರೆದುಕೊಂಡು ಬಂದಿರುತ್ತಾರೆ ಎನ್ನುತ್ತಾರೆ ಎಲ್ಲಿಂದ ಎಂದು ಗೊತ್ತಿಲ್ಲ ಎನ್ನುತ್ತಾರೆ. ಸದರಿ ವ್ಯವಹಾರ 80 ಸಾವಿರ ರೂಗಳಿಗೆ 1 ಎಕರೆ 36 ಗುಂಟೆ ಸಂಬಂದಿಸಿದಂತೆ

ಆಗಿರುತ್ತದೆ. ಸದರಿ ವ್ಯವಹಾರ ದಿನಾಂಕ 14.10.2006 ರಂದು ಆಗಿರುತ್ತದೆ. ನಿಶಾನೆ ಪಿ 2 ರಂತೆ ಮಾತುಕತೆಯಾಗಿರುತ್ತದೆಯಾಎಂದರೆ ಸಾಕ್ಷಿ ಹೌದು ಎನ್ನುತ್ತಾರೆ ಎಲ್ಲಿ ಎಂದರೆ ಸಾಕ್ಷಿ ಮಲ್ಲವ್ವ ರವರ ದೇವಲಾಪೂರ ರಸ್ತೆ ಜನತಾ ಕಾಲನಿಯಲ್ಲಿ ಆಗಿರುತ್ತದೆ ಎನ್ನುತ್ತಾರೆ. ಏನು ಕರಾರು ಆಗಿರುತ್ತದೆ ಎಂದರೆ ಸಾಕ್ಷಿ ನಾವು ಹಣ ಕೊಡುವುದು ಅವರು ಆಮೇಲೆ ಬರೆದುಕೊಡುವುದು ಆಗಿರುತ್ತದೆ ಎನ್ನುತ್ತಾರೆ. ಎಷ್ಟು ಸಮಯದಲ್ಲಿ ಬರೆದುಕೊಡಲು ಆಗಿರುತ್ತದೆ ಎಂದರೆ ಸಾಕ್ಷಿ ಆ ರೀತಿ ಸಮಯ ಇರುವುದಿಲ್ಲ, ಆಕೆಗೆ 60 ಸಾಕಿರ ರೂ ಹಣ ನೀಡಿರುತ್ತೇವೆ. ಸದರಿ ಹಣ ನಗದು ರೂಪದಲ್ಲಿ ನೀಡಿರುತ್ತೇವೆ. 60 ಸಾವಿರ ರೂ ನೀಡಿದಕ್ಕೆ ಸಂಬಂಧಿಸಿದಂತೆ ನಿಶಾನೆ ಪಿ 2 ನ್ನು ಬರೆದುಕೊಟ್ಟಿರುತ್ತಾರೆ ಅದನ್ನು ಹೊರತುಪಡಿಸಿ ಬೇರೆ ದಾಖಲೆ ಇರುವುದಿಲ್ಲ. ನಿಶಾನೆ ಪಿ 2 ಮಲ್ಲವ್ವ ತಂದಿರುತ್ತಾಳೆ. ನಿಶಾನೆ ಪಿ 2 ನ್ನು ಎಚ್ ಎನ್ ನೇಗಿನಾಳ ಬಾಂಡರೈಟರ ಕಡೆಯಿಂದ ಬರೆಸಿರುತ್ತೇವೆ. ನಿಶಾನೆ ಪಿ 2 ಕ್ಕೆ ಯಾರ ಯಾರ ಸಹಿ ಇರುತ್ತದೆ ಎಂದರೆ ಸಾಕ್ಷಿ ಪ್ರಕಾಶ ಹುಬ್ಬಳ್ಳಿ, ಹಣಮಂತ ಕುಲಕರ್ಣಿ ಹಾಗೂ ಡಿ ಎ ಹಡಪದ ಹಾಗೂ ಬಾಂಡರೈಟರ ರವರದ್ದು ಇರುತ್ತದೆ. ಸಾಕ್ಷಿಗೆ ನಿಶಾನೆ ಪಿ 2 ನ್ನು ತೋರಿಸುತ್ತಿದ್ದು, ಅದರಲ್ಲಿ ಪ್ರಕಾಶ ಹುಬ್ಬಳ್ಳಿ ರವರ ಸಹಿಇರುವುದಿಲ್ಲ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಹೌದು ಎಂದು ಒಪ್ಪಿ ಕೊಳ್ಳುತ್ತಾರೆ. ನಿಶಾನೆ ಪಿ 2 ಯಾವ ತಾರಿಖಿನಂದು ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ವಾದ ಪತ್ರದಲ್ಲಿ ನಿಶಾನೆ ಪಿ 2 ಬರೆದುಕೊಟ್ಟ ನಂತರ 1 ನೇ ಪ್ರತಿವಾದಿಯನ್ನು ಹೋಗಿ ಕೇಳಿದಿರಿ ಆಕೆ ಮುಂದುಡುತ್ತ ಬಂದಳು ಎಂದು ಬರೆದಿರುತ್ತೀರಿ ಎಂದರೆ ಸರಿ. ನಿಶಾನೆ ಪಿ 2 ಆದ ನಂತರ ಯಾವಾಗ ಎಲ್ಲಿ ಎಷ್ಟು ಬಾರಿ ಕೇಳಿರುತ್ತೀರಿ ಎಂದರೆ ಸಾಕ್ಷಿ 2006 ರಲ್ಲಿ 2 ಸಲ ಕೇಳಿರುತ್ತೇನೆ ತಾರೀಖು ಸಮಯ ಹೇಳಲಾಗವುದಿಲ್ಲ. 2006 ರಿಂದ 2010 ರವರೆಗೆ ನೀವು 1 ನೇ ಪ್ರತಿವಾದಿಯನ್ನು ಭೇಟ್ಟಿಯಾಗಿರುವುದಿಲ್ಲವಾ ಎಂದರೆ ಸಾಕ್ಷಿ ಭೇಟ್ಟಿಯಾಗಿದ್ದೇನು ಎನ್ನುತ್ತಾರೆ. ನಿಶಾನೆ ಪಿ 3 ನೋಟಿಸ ಕಳುಹಿಸುವ ಎಷ್ಟು ದಿನದ ಪೂರ್ವದಲ್ಲಿ 1 ನೇ ಪ್ರತಿವಾದಿಯರು ಭೇಟ್ಟಿಯಾಗಿರುತ್ತೀರಿ ಎಂದರೆ ಸಾಕ್ಷಿ 1 ವಾರ ಪೂರ್ವದಲ್ಲಿ ಎನ್ನುತ್ತಾರೆ. ನಾವು ಆಕೆಯನ್ನು ದೇವಲಾಪೂರದ ಜನತಾ ಪ್ಲಾಟ ಮನೆಯಲ್ಲಿ ಭೇಟ್ಟಿಯಾಗಿದ್ದೇವು. ಸಾಕ್ಷಿಗೆ ನಿಶಾನೆ ಪಿ 3 ನ್ನು ತೋರಿಸುತ್ತಿದಲುದ, ಸದರಿ ನೋಟಿಸನ್ನೆ ನಿಮ್ಮ ವಕೀಲರು ಕಳುಹಿಸಿರುವುದಾ ಎಂದರೆ ಸಾಕ್ಷಿ ಸದರಿ ನೋಟಿಸನ್ನು ನೋಡಿ ನನಗೆ ಗೊತ್ತಿಲ್ಲ ವಾದಿಗೆ ಗೊತ್ತು ಎನ್ನುತ್ತಾರೆ. ನಿಶಾನೆ ಪಿ 3 ನೋಟಿಸ ಯಾವ ವಿಳಾಸಕ್ಕೆ ಕಳುಹಿಸಲಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾವು ನೋಟಿಸ ನೀಡಲು ಆರ್ ಎಸ್ ಅಂಗಡಿ ವಕೀಲರಿಗೆ ನೀಡಿದ್ದೇವು. ಸಾಕ್ಷಿಗೆ ನಿಶಾನೆ ಪಿ 3ನ್ನು ತೋರಿಸುತ್ತಿದ್ದು, ಸದರಿ ನೋಟಿಸನಲ್ಲಿ ಯಾವ ವಿಳಾಸ ಇರುತ್ತದೆ ಕೇಳಿದಾಗ ಸಾಕ್ಷಿ ಹಿರೆಮುಳಕೋರು ವಿಳಾಸ ಇರುತ್ತದೆ ಎನ್ನುತ್ತಾರೆ. ಸಾಕ್ಷಿಗೆ ನಿಶಾನೆ ಪಿ 6ಎ ಎಂದು ತೋರಿಸುತ್ತಿದ್ದು, ಅದರಲ್ಲಿ ವಿಳಾಸ ಬೇರೆ ಇರುತ್ತದೆ ಎಂದು ಹೇಳಿದಾಗ ಸಾಕ್ಷಿ ಅದರ ಬಗ್ಗೆ

ನನಗೆ ಗೊತ್ತಿರುವುದಿಲ್ಲ, ವಾದಿಗೆ ಗೊತ್ತಿರುತ್ತದೆ ಎನ್ನು ತ್ತಾರೆ. ನಿಶಾನೆ ಪಿ 3 ನೋಟಿಸನ್ನು ನಿಮ್ಮ ವಕೀಲರು ನಿಶಾನೆ ಪಿ 6ಎ ನೇದ್ದರಲ್ಲಿ ನಮೂದು ಮಾಡಿರುವ ವಿಳಾಸಕ್ಕೆ ಕಳುಹಿಸಿರುತ್ತಾರೆ ಎಂದರೆ ಸರಿ . 1 ನೇ ಪ್ರತಿವಾದಿಯ ಖುದ್ದು ಊರು ಹಿರೆಮಲಕೂರು ಎಂದರೆ ಸರಿ. ದಾವಾ ಸ್ವತ್ತು ಸಹ ಹಿರೆಮಲಕೊರಿನಲ್ಲಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಹಾಗೂ ಆಕೆಯ ಗಂಡ ಹಿರೆಮುಳಕೂರಿನಲ್ಲಿರುತ್ತಿದ್ದರು ಎಂದರೆ ಸರಿ. ಸಾಕ್ಷಿಗೆ ನಿಶಾನೆ ಪಿ 13 ನ್ನು ತೋರಿಸುತ್ತಿದ್ದು ಸದರಿ ದಾಖಲೆಯಂತೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದೇಮಪ್ಪ ಮಲ್ಲಪ್ಪ ಹಾಗೂ 1 ನೇ ಪ್ರತಿವಾದಿಯ ನಡುವೆ ವ್ಯಾಜ್ಯ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾಖಲೆಯಲ್ಲಿಯೇ ಶಿವರಾಯಪ್ಪ ಕೋಲಕಾರ ರವರಿಗೆ ಒಬ್ಬಳು ಮಗಳು ಇದ್ದಾಳೆ ಎಂದು ಸಹ ಹೇಳಿ ದಾಖಲೆ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ ಪ್ರತಿವಾದಿ ನಂಬರ 1 ರವರ ಮಗಳನ್ನು, ಮಲ್ಲಪ್ಪ ಅಂಬಿಗೇರ ರವರಿಗೆ ಮದುವೆ ಮಾಡಿಕೊಟ್ಟಿದ್ದು, ಆಕೆ ಸಂಗೊಳ್ಳಿಯಲ್ಲಿ ವಾಸವಿದ್ದಳು ಎಂದರೆ ಸರಿಯಲ್ಲ. ಬಸವಣೆವ್ವನ ಮಗನೇ ಬೀಮಶೆಪ್ಪ ಅಂಬಿಗೇರ ಎಂದರೆ ಸರಿಯಲ್ಲ. ನಿಶಾನೆ ಪಿ 2 ನ್ನು ಬರೆಸುವಾಗ ಮಾಹಿತಿಯನ್ನು 1 ನೇ ಪ್ರತಿವಾದಿ ನೀಡಿರುತ್ತಾರೆ. ನಿಶಾನೆ ಪಿ 2 ರಲ್ಲಿ ನಮ್ಮ ನಿಮ್ಮ ವಾರಸುದಾರರಿಗೂ ಬಂಧನಕಾರಿಯಾಗಿರುತ್ತದೆ ಎಂದು ಖಂಡಿಕೆ ಇರುತ್ತದೆ ಅದರ ಪ್ರಕಾರ ವಾರಸುದಾರರು 1 ನೇ ಪ್ರತಿವಾದಿಗೆ ಇರುತ್ತಾರೆ ಎಂದರೆ ಅದೇನು ನನಗೆ ಗೊತ್ತಿಲ್ಲ ಆದೇರ ವಾರಸುದಾರರು ಇರುವುದಿಲ್ಲ ಎನ್ನುತ್ತಾರೆ. ನಿಶಾನೆ ಪಿ 13 ರ ಪ್ರಕಾರ ಆದೇಶ1 ನೇ ಪ್ರತಿವಾದಿಯ ಪರವಾಗಿ ಆಹಿರುತ್ತದೆ ಆದಕಾರಣ ಆಕೆ ಮೇಲ್ಮನವಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ, ಆಕೆಗೆ ಯಾವುದೇ ಹಣಕಾಸಿನ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಮಲ್ಲವ್ವ 1 ನೇ ಪ್ರತಿವಾದಿ ನಿಮಗೆ ಆಗಲೀ, ವಾದಿಗೆ ಯಾಗಲೀ ಯಾವುದೇ ಕಾಗದ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಬಾಂಡ್ ಪೇಪರ ಬಿಟ್ಟು, ಯಾವುದೇ ದಾಖಲೆ ಬರೆದುಕೊಟ್ಟಿರುವುದಿಲ್ಲ ಎನ್ನುತ್ತಾರೆ ಮಲ್ಲವ್ವ 1 ನೇ ಪ್ರತಿವಾದಿ ಜೀವಿತಾಕಾಲದಲ್ಲಿ ಯಾವುದೇ ಕಾಗದ ಪತ್ರ ಬರೆದುಕೊಟ್ಟಿರುವುದಿಲ್ಲ, ನಿಶಾನೆ ಪಿ 2 ನ್ನು ನೀವು ಖೊಟ್ಟಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ ನೀವು ನಿಶಾನೆ ಪಿ 6ಎ ರಂತೆ 1 ನೇ ಪ್ರತಿವಾದಿಗೆ ಜನತಾ ಪ್ಲಾಟ ದೇವಲಾಪೂರ, ಆ ಸಮಯದಲ್ಲಿ 1 ನೇ ಪ್ರತಿವಾದಿ ನಿಶಾನೆ ಪಿ 8ರಂತೆ ದಿನಾಂಕ 16.09.2006 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಿನಾಂಕ 16.09.2006 ರಲ್ಲಿ ತೀರಿಕೊಂಡಿದ್ದು, ನಿಮಗೆ ನಿಶಾನೆ ಪಿ 2 ರಂತೆ ದಿನಾಂಕ 14.10.2006 ರಲ್ಲಿ ಖರೀದಿ ಕರಾರು ಪತ್ರ ಬರೆದುಕೊಡುವ ಪ್ರಮೇಶಯ ಇರುವುದಿಲ್ಲ ಎಂದರೆ ಸರಿಯಲ್ಲ . ನನಗೆ 1 ನೇ ಪ್ರತಿವಾದಿ ತೀರಿಕೊಂಡಿದ್ದು, ಆಕೆ ತೀರಿಕೊಂಡ 15 ದಿವಸಗಳ ನಂತರ ಗೊತ್ತಾಗಿರುತ್ತದೆ. ನಂತರ ನೀವು ನಿಶಾನೆ ಪಿ 2 ನ್ನು ಸೃಷ್ಟಿ ಮಾಡಿರುತಿತೀರಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಜೀವಿತಕಾಲದಲ್ಲಿ ಜೊಗತಿಯಾಗಿದ್ದು, ಆಕೆ ಎಲ್ಲರ ಮನೆಗೆ

ಜೋಗತಿಯಾಗಿ ಹೋಗುತ್ತಿದ್ದರು ಅಕೆಗೆ ಹಿರೆಮೊಳಕೂಲುರಿನಲ್ಲಿಆ ಸ್ತಿ ಇತ್ತು ಆಕೆ ತೀರಿಕೊಂಡ ನಂತರ ಅದನ್ನು ನೀವು ತಿಳಿದುಕೊಂಡು ನಿಶಾನೆ ಪಿ 2 ನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಬೈಲಹೊಂಗಲದಲ್ಲಿ ಆಕೆಗೆ ಬಹಳ ಜನ ಪರಿಚಯ ಇದ್ದು, ಆಕೆಯ ವಾರಸುದಾರರಿಗೆ ಗೊತ್ತಾಗುತ್ತದೆ ಎಂದು ನೀವು ಬೆಳಗಾವಿಯ ವಾದಿಯನ್ನು ಕರೆದುಕೊಂಡು ಬಂದು ನಿಶಾನೆ ಪಿ 2 ನ್ನು ಅವರ ಹೆಸರಿನಲ್ಲಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಶಾನೆ ಪಿ 2 ನ್ನು ಸೃಷ್ಟಿ ಮಾಡಿ ನೀವು ಮರಣ ಉತಾರವನ್ನು ನಿಶಾನೆ ಪಿ 8 ನ್ನು ತೆಗೆಸಿರುತ್ತೀರಿ ಎಂದರೆ ಸರಿಯಲ್ಲ. ನಿಶಾನೆ ಪಿ 2 ಕಾರಣ ಮರಣ ದಿನಾಂಕದಿಂದ ಮುಂದೆ ಇದ್ದ ಕಾರಣ ನೀವು ಇನ್ನೊಂದು ಮರಣ ಪ್ರಮಾಣ ಪತ್ರ ನಿಮ್ಮ ಪ್ರಭಾವ ಬಳಸಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಶಾನೆ ಪಿ 7 ನ್ನು ತೋರಿಸಿದ್ದು, ಅದರಲ್ಲಿ ಮೃತರ ವಿಳಾಸ ಧಾರವಾಡ ಬೈಪಾಸ ರೋಡ ಬೈಲಹೊಂಗಲ ಎಂದು ನಮೂದು ಇರುತ್ತದೆ ಎಂದು ಸಾಕ್ಷಿ ನೋಡಿ ಹೌದು ಎನ್ನುತ್ತಾರೆ , ನಿಶಾನೆ ಪಿ 8 ರಲ್ಲಿ ಆಶ್ರಯ ಕಾಲನಿ ದೇವಲಾಪೂರ ರಸ್ತೆ ಬೈಲಹೊಂಗಲ ಎಂದು ನಮೂದು ಇರುತ್ತದೆ ಎಂದರೆ ಸರಿ ಎನ್ನುತ್ತಾರೆ

ಮುಂದುವರೆದ ಪಾಟೀ ಸವಾಲಿಗೆ ಸಮಾಯಾವಕಾಶ ಕೇಳಿದ್ದು, ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

sd/-

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ